ಕನ್ನಡ ಪ್ರಭ, 13-11-2016, Page no. 2.

# ಬರ ಸಮಸ್ಯೆಗೆ ಕೆರೆ ಪರಿಹಾರ

## ಆಪತ್ತಿನಲ್ಲಿರುವ ಮಲೆನಾಡಿನ ಕೆರೆಗಳು ರಕ್ಷಣೆಗೆ ಆದ್ಯತೆ। ಜಲ ಮೂಲ ರಕ್ಷಣೆಯೆ ಸಮ್ಮೇಳನದ ಉದ್ದೇಶ

• ವಿಶ್ವಾಮಿತ್ರ ಹೆಗಡೆ

ಕನ್ನಡಪ್ರಭ ವಾರ್ತೆ, ಶಿರಸಿ, ನ. 12

ಕೆರೆ ಸಂರಕ್ಷಣೆಯ ಮೂಲ ಉದ್ದೇಶಕ್ಕೆ ಆದ್ಯತೆ ಕೊಡಬೇಕಾಗಿದೆ. ಜೈವಿಕ ಚಕ್ರ ನಿರಂತರವಾಗಿರಬೇಕಾದರೆ ಕೆರೆಗಳು ಸುಸ್ಥಿತಿಯಲ್ಲಿರಬೇಕು. ಬರಗಾಲಕ್ಕೆ ಪರಿಹಾರವೂ ಕೆರೆಗಳೇ ಆಗಿವೆ. ಕೆರೆಯ ನೀರನ್ನು ಕೆರೆಗೆ ಚೆಲ್ಲು ಎನ್ನುವಂತೆ ಕೆರೆಯ ನೀರಿನ ಬಳಕೆ ಸೀಮಿತವಾಗಿರಬೇಕು.

ಭೂಮಿಯಲ್ಲಿ ಬೇರೆ ಬೇರೆ ಪದರುಗಳಿದ್ದಂತೆ ಜಲಗಳಲ್ಲಿಯೂ ಪದರಗಳಿವೆ. ಜಲದ ಮೇಲ್ಪದರ ಶುದ್ಧವಾಗಿದ್ದರೆ ಮಧ್ಯದಲ್ಲಿರುವ ಜಲಚರಗಳ ಪದರ ನಿರಂತರವಾಗಿರುತ್ತದೆ, ಜೀವಂತವಾಗಿರುತ್ತವೆ. ತಳದಲ್ಲೂ ಶುದ್ಧತೆಯನ್ನು ಕಾಣಬಹುದಾಗಿದೆ. ಈಗ ಕೆರೆಗಳ ಸ್ಥಿತಿ ಸಾಕಷ್ಟು ಬಿಗಡಾಯಿಸಿದೆ. ಮೇಲ್ಪದರದಲ್ಲಿ ತ್ಯಾಜ್ಯಗಳು ಅಥವಾ ಮಲಿನಗಳಿದ್ದರೆ ಸೂರ್ಯನ ಕಿರಣಗಳು, ಜಲಮೂಲಗಳಿಗೆ ತಲುಪುವುದೇ ಇಲ್ಲ. ಇದರಿಂದಾಗಿ ಜಲದಲ್ಲಿರುವ ಎಲ್ಲ ಪದರಗಳು ಕಲುಷಿತಗೊಳ್ಳುತ್ತವೆ ಮತ್ತು ನಿಸ್ತೇಜಗೊಳ್ಳುತ್ತವೆ. ನೀರು ನಿರಂತರವಾಗಿರಬೇಕಾದರೆ ಅದರ ಸಂರಕ್ಷಣೆ, ಪುನರುಜ್ಜೀವನ, ಶುದ್ಧತೆ ಕಾಪಾಡುವುದು ತೀರಾ ಅವಶ್ಯಕವಾಗಿದೆ.

ಮಲೆನಾಡಿನ ಕೆರೆಗಳ ಜತೆ ಹಳ್ಳ, ತೊರೆ, ರಾಂಪತ್ರೆ ಜಡ್ಡಿ ಮುಂತಾದ ಜೌಗು ಪ್ರದೇಶಗಳು ಇಂದು ಆಪತ್ತಿಗೆ ಸಿಲುಕಿವೆ. ಜಾಗತಿಕ ಹವಾಮಾನ ಬದಲಾವಣೆ ಕಾರಣದಿಂದ ಪಶ್ಚಿಮ ಘಟ್ಟದ ಜೀವ-ಸಸ್ಯ, ಜಲಮೂಲಗಳ ಮೇಲೆ ಗಂಭೀರ ಪರಿಣಾಮಗಳಾಗುತ್ತಿದೆ. ಜಲ ಹರಿವಿನಲ್ಲಾಗುವ ಪರಿಣಾಮಗಳು ಜಲಚರಗಳ ಸಂತಾನೋತ್ಪತ್ತಿ ಪ್ರದೇಶ ನಾಶ, ಜೀವವೈವಿಧ್ಯಗಳ ನಾಶದಿಂದ ಮಲೆನಾಡು ಬರದ ನಾಡಾಗದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಕೆರೆ ಸಮ್ಮೇಳನದ ಮೂಲ ಆಶಯ ಎಂದರೆ ಪರಿಸರ ಸಂರಕ್ಷಣೆ, ಪುನರುಜ್ಜೀವನ,

**ಮಲೆನಾಡಿನ ಕೆರೆಗಳ ಜತೆ ಹಳ್ಳ, ತೊರೆ, ರಾಂಪತ್ರೆ ಜಡ್ಡಿ ಮುಂತಾದ ಜೌಗು ಪ್ರದೇಶಗಳು ಇಂದು ಆಪತ್ತಿಗೆ ಸಿಲುಕಿವೆ. ಜಾಗತಿಕ ಹವಾಮಾನ ಬದಲಾವಣೆ ಕಾರಣದಿಂದ ಪಶ್ಚಿಮ ಘಟ್ಟದ ಜೀವ-ಸಸ್ಯ, ಜಲಮೂಲಗಳ ಮೇಲೆ ಗಂಭೀರ ಪರಿಣಾಮಗಳಾಗುತ್ತಿದೆ.**

ಜಲವಿಜ್ಞಾನ, ಭೂ ವಿಜ್ಞಾನದ ಬಗ್ಗೆ ತಿಳಿವಳಿಕೆ ಹೆಚ್ಚಿಸುವುದು ಹಾಗೂ ಜನ ಸಹಭಾಗಿತ್ವ, ನೀತಿ ನಿರೂಪಕರ ಮೇಲೆ ರಚನಾತ್ಮಕ ಒತ್ತಡ ನಿರ್ಮಾಣ, ವಿದ್ಯಾರ್ಥಿ-ಶಿಕ್ಷಕರ ಸಮುದಾಯದಲ್ಲೂ ಕೆರೆ-ಜಲಮೂಲಗಳ ಬಗ್ಗೆ ಜಾಗೃತಿ ಮಾಡಿಸುವುದು, ನಾಡಿನ ವಿದ್ಯಾರ್ಥಿ ಸಮುದಾಯವನ್ನು ನೇರ ಕೆರೆ ಅಭ್ಯಾಸದಲ್ಲಿ ತೊಡಗಿಸುವ ಉದ್ದೇಶ ಈ ಸಮ್ಮೇಳನದ್ದಾಗಿದೆ.

**ಸೋಂದಾದಿಂದ ಆರಂಭ:** ಕೆರೆ ಸಮ್ಮೇಳನದ ಭಾಗವಾಗಿ 2014ರ ಮಾರ್ಚ್ 15ರಿಂದ ಸೋಂದಾದಿಂದ ಆರಂಭವಾದ ಕೆರೆ ಸಮ್ಮೇಳನ ಸಂರಕ್ಷಣೆಕುರಿತಜಾಗೃತಿಅಭಿಯಾನಹಳ್ಳಿ-ಪಟ್ಟಣಗಳ ಬೆಸುಗೆಯಾಗಿ ಮುನ್ನಡೆಯುತ್ತಿದೆ. ವರದಾ ಮೂಲದಿಂದ ಧರ್ಮಾ ಮೂಲದ ವರೆಗೆ, ಕಪ್ಪತಗುಡ್ಡದಿಂದ ಶೀಗೆಹಳ್ಳಿವರೆಗೆ ಕೆರೆ-ನದಿ ಮೂಲ ಅಧ್ಯಯನ, ವಿದ್ಯಾರ್ಥಿಗಳಿಂದ ಸಮೀಕ್ಷೆ ನಡೆದಿವೆ. ಬೆಂಗಳೂರಿನಲ್ಲಿ, ಉ.ಕ, ಶಿವಮೊಗ್ಗ ಜಿಲ್ಲೆಗಳಲ್ಲಿ 110 ಪ್ರೌಢಶಾಲೆಗಳು ಅಭಿಯಾನದಲ್ಲಿ ಪಾಲ್ಗೊಂಡಿವೆ. ಬೆಂಗಳೂರಿನಲ್ಲಿ ಸಮ್ಮೇಳನ ಪೂರ್ವ ಕೆರೆ ಉಳಿಸಿ ವಿಚಾರ ಸಂಕಿರಣ ನಡೆದಿದೆ.

ಸಮ್ಮೇಳನದಲ್ಲಿ ಕೆರೆ ಪುನರುಜ್ಜೀವನದ ಕುರಿತಂತೆ ಪ್ರಬಂಧ ಮಂಡನೆಯಾಗಲಿದೆ. ಚರ್ಚೆಯಾಗಲಿದೆ. ಕೆರೆಯ ಯಶೋಗಾಥೆ ವರದಿ ಬಿಡುಗಡೆಯಾಗಲಿದೆ. ಕಲ್ಯಾಣಿ, ಕೆರೆ-ಕುಂಟೆ, ಹಳ್ಳ-ಕೊಳ್ಳಗಳ ಬಗ್ಗೆ ಸಮಾಲೋಚನೆನಡೆಯಲಿದೆ. ಅಧಿಕಾರಿವರ್ಗದವರ ಜತೆ ಜಲಸಂವರ್ಧನೆ ಕುರಿತಂತೆ ಸಂವಾದ ಏರ್ಪಾಡಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿರುವ ಜೌಗು ಭೂಮಿ ಪರಿಸ್ಥಿತಿ ಶೋಚನೀಯವಾಗಿದ್ದು, ಆ ಬಗ್ಗೆಯೂ ವಿಸ್ತೃತ ಚರ್ಚೆ ನಡೆದು ತೀರ್ಮಾನ ಕೈಗೊಳ್ಳುತ್ತಿರುವುದು ಸಮ್ಮೇಳನದ ವಿಶೇಷವೂ ಆಗಿದೆ. ವಿನಾಶನದ ಅಂಚಿನಲ್ಲಿರುವ ರಾಮಪತ್ರೆ ಜಡ್ಡಿಯಂತಹ ಸಸ್ಯಸಂಕುಲಗಳ ಅಭಿವೃದ್ಧಿ ತುರ್ತು ಅಗತ್ಯವಾಗಿದೆ. ಕೆರೆ, ಜಡ್ಡಿಗಳು, ಧಾರಣ ಸಾಮರ್ಥ್ಯ, ಪಾರಿಸಾರಿಕ ಸೇವೆಗಳು, ದೇವರಕಾಡು, ಭೂ ಕವಚ, ಭೂ ಬಳಕೆಯಲ್ಲಿನ ಬದಲಾವಣೆ ಪರಿಸ್ಥಿತಿ, ಜಲಮಾಲಿನ್ಯ, ಸುಸ್ಥಿರ ಕೃಷಿ, ಜೌಗು ಭೂಮಿ, ಪರಿಸರ ಶಿಕ್ಷಣ ಕುರಿತಂತೆ ಮಾಹಿತಿ ವಿನಿಮಯವಾಗಲಿದೆ. ಇವುಗಳ ಸಂರಕ್ಷಣೆಗಾಗಿ ತಜ್ಞರು ಮಾರ್ಗಸೂಚಿ ಅಳವಡಿಸಲಿದ್ದಾರೆ. ವೈಶಿಷ್ಟ್ಯಪೂರ್ಣವಾಗಿ ಕೆರೆ ಸಮ್ಮೇಳನವನ್ನು ಸಂಘಟಿಸಲಾಗಿದೆ.



ವೃಕ್ಷಲಕ್ಷ ಪ್ರಶಸ್ತಿಗೆ ಭಾಜನರಾಗಿರುವ ಸ್ವಾಮಿ ವಿಷ್ಣುಮಯಾನಂದ

### ವೃಕ್ಷಲಕ್ಷ ಪ್ರಶಸ್ತಿ

ವೃಕ್ಷಲಕ್ಷ ಪ್ರಶಸ್ತಿಗೆ ಈ ವರ್ಷ ಬೆಂಗಳೂರು ಸಮೀಪದ ಆನೇಕಲ್ ತಾಲೂಕಿನ ಶಿವೇನಹಳ್ಳಿಯ ಸ್ವಾಮಿ ವಿಷ್ಣುಮಯಾನಂದ ಅವರನ್ನು ಆಯ್ಕೆ ಮಾಡಲಾಗಿದೆ. ರಾಮಕೃಷ್ಣ ಮಿಷನ್ ಸ್ವಾಮೀಜಿಯಾಗಿದ್ದ ವಿಷ್ಣುಮಯಾನಂದ 25 ವರ್ಷಗಳಿಂದ ಕಲ್ಲುಗುಡ್ಡ, ಬರಡು ಭೂಮಿಯಲ್ಲಿ 300 ಎಕರೆ ಕಾಡು ಬೆಳೆಸಿದ್ದಾರೆ. ಪಶ್ಚಿಮಘಟ್ಟದ ಗಿಡಮೂಲಿಕೆಗಳು ಬಿದಿರು, ಶ್ರೀಗಂಧ, ಬೀಟೆ, ಮತ್ತಿ, ಹೊನ್ನೆಗಳ ವನ ಬೆಳೆಸಿದ್ದಾರೆ. ನೀರೇ ಇಲ್ಲದ ಬರಗಾಲದ ನಾಡಲ್ಲಿ ಹಳ್ಳ, ಕೆರೆಗಳನ್ನು ನಿರ್ಮಿಸಿದ್ದಾರೆ. ವನ್ಯಜೀವಿ, ಜಾನುವಾರು, ಹಳ್ಳಿಗಳ ಭೂಮಿಗೆ ನೀರುಣಿಸಿದ್ದಾರೆ. ಅನಾಥ ಮಕ್ಕಳ ಶಾಲೆ, ಗೋಶಾಲೆ ನಡೆಸುತ್ತಿದ್ದಾರೆ.

### ಕೆರೆ ಸಾಧಕರಿಗೆ ಸನ್ಮಾನ

ಕೆರೆ ಸಾಧಕರಿಗೆ ಸನ್ಮಾನ ಮಾಡುತ್ತಿರುವುದು ವೈಶಿಷ್ಟ್ಯಪೂರ್ಣವಾಗಿದೆ. ತನ್ಮೂಲಕ ಕೆರೆ ಸಂರಕ್ಷಣೆ, ಪುನರುಜ್ಜೀವನ ಕಾರ್ಯದಲ್ಲಿ ಸಾರ್ವಜನಿಕರು ಇನ್ನಷ್ಟು ತೊಡಗಿಕೊಳ್ಳಲು ಈ ಸನ್ಮಾನ ಪ್ರೇರಣಾದಾಯಕ ಎಂದೇ ಹೇಳಬಹುದು. ವಿಜ್ಞಾನಿಗಳು, ವಿದ್ಯಾರ್ಥಿಗಳಿಗೆ ಮಾರ್ಗಸೂಚಿಯಾಗಿ ತಯಾರಿಸಲ್ಪಟ್ಟ ಸಂಶೋಧನಾ ವರದಿ ನಾಡಿಗೆ ಹೊಸ ದಿಕ್ಸೂಚಿ ನೀಡುವಂತದ್ದಾಗಿದೆ. ಬಯಲು ಸೀಮೆಯನ್ನೊಳಗೊಂಡಂತೆ ಮಳೆ ಕಡಿಮೆ ಬೀಳುವ ಪ್ರದೇಶಗಳಾದ ಚಿತ್ರದುರ್ಗ, ಕೋಲಾರ, ರಾಯಚೂರು, ಕಲಬುರಗಿ, ಮುಂತಾದ ಪ್ರದೇಶಗಳಲ್ಲಿಯ ನೀರಿನ ಕೊರತೆ ನೀಗಿಸುವ ಪ್ರಯತ್ನಕ್ಕೆ ಈ ಸಂಶೋಧನಾ ವರದಿಗಳು ಮುನ್ನುಡಿ ಬರೆಯಲಿದೆ. ಕೆರೆ-ಜೌಗು ಭೂಮಿ-ಕೃಷಿ ಭೂಮಿ ಉಳಿಸಿ ಎಂಬುದು ಈ ವರ್ಷದ ಜಾಗತಿಕ ಜೌಗು ಭೂಮಿದಿನದ ಘೋಷಣೆಯಾಗಿದೆ. ಮಲೆನಾಡು, ಘಟ್ಟ ಪ್ರದೇಶಗಳಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನೊಳಗೊಂಡಂತೆ ಭಾರಿ ಪ್ರಮಾಣದ ಭೂಕುಸಿತ ಆಗುತ್ತಿರುವುದರ ಕುರಿತಂತೆಯೂ ಸಮ್ಮೇಳನ ಬೆಳಕು ಚೆಲ್ಲಲಿದೆ.